ಸಹ ಅರಿವೇ ಆಗಿರಲಿಲ್ಲ. ರಜಾ ಇದ್ದುದರಿಂದ ಅವನು ಮಾವನನ್ನು ಮಾತಾಡಿಸಿಕೊಂಡು ಹೋಗಲು ಅಲ್ಲಿಗೇ ಹುಡುಕಿಕೊಂಡು ಬಂದಿದ್ದ.

'ಹಂಗಾದ್ರೆ ತಲೆತಲಾಂತರಕ್ಕೂ ನಾವು ಹಿಂಗೇ ನಾಯಿ ನರಿಗಳ ಹಂಗೇ ಬದುಕಬೇಕು ಅಂತೀಯಾ ಮಂಜಣ್ಣ' ಎಂದ ದುಮ್ಮನ ಮಾತಿನಲ್ಲಿನ ನಿರಾಸೆ ಹುಡುಗನ ಹೃದಯಕ್ಕೆ ಚುಚ್ಚಿತು.

ಅವನು ಅವರ ಎದುರಿಗೆ ಬಂದ.

'ಅದ್ಯಾಕೆ ಅಷ್ಟು ನಿರಾಸೆಯ ಮಾತಾಡ್ತೀರಿ. ನೀವು ಈ ಕಾಡುಕೊಂಪೆಯಲ್ಲೇ ಉಳಿದು, ನಾವು ಹೇಗೆ ಬದುಕಬಹುದು ಎಂಬ ಅರಿವೇ ಇಲ್ಲದೆ ಹೋಯಿತು. ನಿಮ್ಮ ಎದೆಗೂ ಅಕ್ಷರ ಬಿದ್ದಿದ್ದರೆ ನಮಗೂ ಮನುಷ್ಯರಂತೆ ಬದುಕುವ ಹಕ್ಕಿದೆ ಎಂಬುದು ಅರಿವಾಗ್ತಾ ಇತ್ತು'.

ದುಮ್ಮ ಅವನನ್ನೇ ಮಿಕಿ ಮಿಕಿ ನೋಡುತ್ತಾ ವಿಸ್ಮಯದಿಂದ ಕಿವಿ ತೆರೆದು ಕುಳಿತ.

"ಬಾಬಾ ಸಾಹೇಬ ಅಂಬೇಡ್ಕರ್ ಎನ್ನುವವರು ನಮ್ಮ ದೇಶಕ್ಕೆ ಸಂವಿಧಾನ ಎಂಬ ಗ್ರಂಥವನ್ನೇ ಬರೆದುಕೊಟ್ಟಿದ್ದಾರೆ. ಅದರ ಪ್ರಕಾರ ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಮನುಷ್ಯನಂತೆ ಬದುಕುವ ಸಮಾನ ಹಕ್ಕುಗಳಿವೆ ಎಂದು ಹೇಳಿದ್ದಾರೆ. ಅಧಿಕಾರ ನಡೆಸುವವರು ಯಾವುದೇ ಕಾನೂನು ಮಾಡುವಾಗಲೂ ಅದರ ನಿಯಮದಂತೆಯೇ ಪಾಲಿಸಬೇಕು. ಈಗ ನೋಡಿ, ನಮ್ಮ ಪೀಳಿಗೆಯವರಿಗೆ ವಿದ್ಯೆ ದೊರೆಯುತ್ತಿದೆಯಲ್ಲಾ ಅದೂ ಬಾಬಾ ಸಾಹೇಬರ ಕೊಡುಗೆಯೇ.

ನಮ್ಮಂಗೆಯೇ ದಲಿತರಾಗಿ ಹುಟ್ಟಿದ ಅವರು ಅವರ ಅನುಭವಗಳ ಆಧಾರದ ಮೇಲೆ ಹಲವಾರು ಗ್ರಂಥಗಳನ್ನು ಬರೆದು ಅವರ ವಿಚಾರಧಾರೆಯನ್ನು ಜನರಿಗೆ ತಲುಪುವಂತೆ ಮಾಡಿದ್ದಾರೆ. ಅದನ್ನೆಲ್ಲಾ ಓದಿ ಅರಿಯುವಂತಾದರೆ ನಾವೂ ಎಲ್ಲರಂತೆಯೇ ಮನುಷ್ಯರು ಅನ್ನುವುದು ತಿಳಿಯುತ್ತೆ" ಎಂದು ತನಗೆ ತಿಳಿದಿದ್ದನ್ನು ಅವರಿಗೆ ಹೇಳಲು ಯತ್ನಿಸಿದ.

'ಹಂಗಾದ್ರೆ ಈ ಹೋಬಳಿ ಅಯ್ನವರ ಮನೇಲಿರೋ ಗ್ರಂಥಗಳು!' ಎನ್ನುತ್ತಾ ದುಮ್ಮ ಮಂಜಣ್ಣನ ಮುಖ ನೋಡಿದ.

ಮಂಜಣ್ಣನಿಗೂ ಹುಡುಗನ ಮಾತು ಕುತೂಹಲ ಮೂಡಿಸಿತ್ತು.

'ಅಲ್ಲಾ ಮಗಾ, ಈ ಬಾಬಾ ಸಾಹೇಬ್ರು ಋಷಿ ಮುನಿಗಳಿಗಿಂತಾ ದೊಡ್ಡವ್ರಾ ಹಂಗಾದ್ರೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದ.

ಹುಡುಗನಿಗೆ, ಎಲ್ಲ ವಿಚಾರಗಳನ್ನೂ ಅವರೆದುರಿಗೆ ವಿಸ್ತಾರವಾಗಿ ಬಿಚ್ಚಿ ಹೇಳಬೇಕು ಎನಿಸಲಿಲ್ಲ.

'ಅವರ ವಿಚಾರಧಾರೆ ಹೆಚ್ಚು ಹೆಚ್ಚು ಜನಕ್ಕೆ ತಲಪುತ್ತಾ ಹೋದಂತೆ ಬಾಬಾ ಸಾಹೇಬರ ಮಹತ್ವ ಏನು ಎಂದು ಅರಿವಾಗುತ್ತೆ' ಎಂದು ಹೇಳಿ ಮಾತು ನಿಲ್ಲಿಸಿದ್ದ.

ಹಳೆಯದನ್ನೆಲ್ಲಾ ಮೆಲುಕು ಹಾಕುತ್ತಾ, ಮರೆತಂತಿದ್ದ ದುಮ್ಮನಿಗೆ ಮಲಮೂತ್ರ ಬಾಧೆ ಇನ್ನು ತಡೆಯಲು ಸಾಧ್ಯವಿಲ್ಲವೆಂಬಂತೆ ಮತ್ತೆ ಪ್ರಕಟವಾಗತೊಡಗಿತು.

'ಏನಪ್ಪಾ ಮಾಡುವುದು, ದೇವರೇ' ಎಂದುಕೊಳ್ಳುತ್ತ ಎದ್ದು ನಿಂತ. ಒತ್ತಿ ಬರುತ್ತಿರುವ ಮೂತ್ರ ಬಾಧೆಯನ್ನಾದರೂ ಪರಿಹರಿಸಿಕೊಂಡರೆ ಹಗುರವಾಗಿ, ಇನ್ನಷ್ಟು ನಿಮಿಷ ಮಲಬಾಧೆ ತಡೆದುಕೊಳ್ಳಲು ಸಾಧ್ಯವಾಗಬಹುದು. ಅಷ್ಟರಲ್ಲಿ ಬನದ ಕಡೆಯಿಂದ ಗುಂಡಿನ ಶಬ್ದ ಕೇಳಬಹುದು ಎಂದು ಮನಸ್ಸಿನಲ್ಲೇ ಸಮಾಧಾನ ಹೇಳಿಕೊಳ್ಳುತ್ತಾ, ಗುಡ್ಲಿನ ಹಿಂಭಾಗಕ್ಕೆ ಓಡಿ ಹೋಗಿ ಒಂದೆಡೆ ನರಕೆಯನ್ನು ತೂತು ಮಾಡಿ ಆ ಮೂಲಕ ಮೂತ್ರ ವಿಸರ್ಜನೆ ಪೂರೈಸಿದ. ಮೂತ್ರ ವಿಸರ್ಜನೆಯ ನಂತರ ಮಲ ಬಾಧೆಯನ್ನು ಇನ್ನಷ್ಟು ಕಾಲ ಮುಂದೂಡಬಹುದೆಂಬ



